ಓ ಎಸ್ ನಂಃ 278/2019
ಪಿ ಡಬ್ಲ್ಯೂ ಃ 1

**ದಿಃ 08.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಕೆ ಎನ್ ವಕೀಲರಿಂದ :-**

ನಾನು ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲಾತಿಗಳು ನನಗೆ ಗೊತ್ತು. ನಿಪಿ 1 ಮತ್ತು 15 ರ ಕ್ರಯದ ಕರಾರು ಪತ್ರಗಳನ್ನು ಬರೆಯುವ ಕಾಲಕ್ಕೆ ಅಲ್ಲಿ ಯಾರು ಯಾರು ಹಾಜರಿದ್ದರು ಎಂದರೆ ಸಾಕ್ಷಿಯು ನನ್ನ ಕಡೆ ಗೋಪಾಲ್ ಮತ್ತು ಪ್ರತಿವಾದಿಯ ಕಡೆ ಉಮೇಶಯ್ಯ, ಸುಖನ್ಯ, ಕೆಂಪಣ್ಣ, ಮಹದೇವಯ್ಯ, ರೇಣುಕಾಪ್ರಸಾದ್ ಮತ್ತು ಆತನ ಹೆಂಡತಿಯು ಹಾಜರಿದ್ದರು. ನಿಪಿ 15 ರ ಕ್ರಯದ ಕರಾರು ಪತ್ರವನ್ನು ನನ್ನ ಕಛೇರಿಯಲ್ಲಿ ಬರೆಯಲಾಗಿದೆ. ನಿಪಿ 15 ರ ಕ್ರಯದ ಕರಾರು ಪತ್ರವನ್ನು ತಯಾರಿಸಲು ನನ್ನ ಸಿಬ್ಬಂದಿಯಾದ ರೇಣುಗೋಪಾಲ್ ದಸ್ತಾವೇಜು ಪತ್ರವನ್ನು ತಂದಿರುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ದಿಃ 05.07.2013 ರಂದು ಒಂದು ಕ್ರಯದ ಕರಾರು ಪತ್ರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು ಅದು ದಿಃ 05.07.2013 ರ ಒಂದು ನೋಂದಾಯಿತವಲ್ಲದ ಕ್ರಯದ ಕರಾರು ಪತ್ರದ ಜೆರಾಕ್ಸ್ ಪ್ರತಿಯಾಗಿದ್ದು ಸಾಕ್ಷಿಯು ಸದರಿ ದಾಖಲಾತಿಯಲ್ಲಿರುವ 3 ಮತ್ತು 4 ನೇ ಪುಟದಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಒಪ್ಪಿಗೆಯ ಮೇರೆಗೆ ಸದರಿ ದಾಖಲಾತಿಯನ್ನು **ನಿಡಿ 1** ಮತ್ತು ಸಾಕ್ಷಿಯ ಸಹಿಗಳನ್ನು ಕ್ರಮವಾಗಿ **ನಿಡಿ 1(ಎ) ಮತ್ತು ನಿಡಿ 1(ಬಿ) ಎಂದು ಗುರುತಿಸಲಾಯಿತು.** ನಿಪಿ 15 ರ ಕ್ರಯದ ಕರಾರು ಪತ್ರವನ್ನು ತಯಾರಿಸಲು ಪ್ರತಿವಾದಿಗಳ ಒಪ್ಪಿಗೆ ಇರುವುದಿಲ್ಲ ಆದರೂ ಸಹ ದಾಖಲಾತಿಯನ್ನು ತಮ್ಮ ಕಛೇರಿಯಲ್ಲಿ ತಯಾರು ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಪಿ 15 ರ ಕ್ರಯದ ಕರಾರು ಪತ್ರವನ್ನು ಕಾಲ ಪರಿಮಿತಿ ವಿಳಂಬವನ್ನು ತಪ್ಪಿಸುವ ಉದ್ದೇಶದಿಂದ ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ. ತಾವು ಪ್ರತಿವಾದಿಗಳ ಸಹಿಗಳನ್ನು ಖಾಲಿ ದಸ್ತಾವೇಜಿನ ಮೇಲೆ ಪಡೆದು ನಿಪಿ 15 ರ ದಾಖಲಾತಿಯನ್ನು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಪಿ 15 ರ ಕ್ರಯದ ಕರಾರು ಪತ್ರವನ್ನು ತಾವು ತಮ್ಮ ಅನುಕೂಲಕ್ಕಾಗಿ ಸೃಷ್ಟಿ ಮಾಡಿಕೊಂಡಿದ್ದೀರಿ ಸದರಿ ದಾಖಲಾತಿಯಲ್ಲಿ ಯಾವುದೇ ಸಾಕ್ಷಿದಾರರ ಸಹಿಗಳು ಇರುವುದಿಲ್ಲ. ತಾವು ಪ್ರತಿವಾದಿಗಳ ವಿರುದ್ಧ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿದ್ದೀರಿ ಎಂದರೆ ಸರಿಯಲ್ಲ. ಪೋಲಿಸರು "ಬಿ" ವರದಿಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 19 ರಿಂದ 41 ರ ವರೆಗಿನ

ಓ ಎಸ್ ನಂಃ 278/2019

**ಪಿ ಡಬ್ಲ್ಯೂ ಃ 1**

ದಾಖಲಾತಿಗಳು ಈ ದಾವೆಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮಗೆ ಬರೆದುಕೊಟ್ಟಿರುವ ಕ್ರಯದ ಕರಾರು ಪತ್ರಗಳನ್ನು ಮತ್ತು ಜಿ ಪಿ ಎ ಪತ್ರವನ್ನು ರದ್ದು ಪಡಿಸಲು ಪತ್ರಿಕಾ ಪ್ರಕಟಣೆ ತೆಗೆದುಕೊಂಡಿರುತ್ತಾರೆ ಮತ್ತು ತಮಗೆ ಸದರಿ ವಿಚಾರವಾಗಿ ನೋಟಿಸ್ ನ್ನು ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**